**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>**

ಸಿ.ಸಿ. ನಂಃ 576/2016 ಸಿಡಬ್ಲೂ: 1 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 12-11-2025

ಹೆಸರು : ಸೂರ್ಯಕಾಂತ

ತಂದೆ ಹೆಸರು : ಬಸವಂತರಾವ್

ವಯಸ್ಸು : 50 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಹೊಸಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿತನು ನನಗೆ ಗೊತ್ತು. ಚಾ ಸಾ 2 ನನಗೆ ಗೊತ್ತು. ಭೀಮಾಶಂಕರ್ ನನ್ನ ಮಗ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು, ಸಾಕ್ಷಿಯು ಸದರಿ ದಾಖಲಾತಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಸಾಕ್ಷಿಯು ಅದರಲ್ಲಿ ಇರುವ ತನ್ನ ಸಹಿಯನ್ನು ನಿಪಿ-1(ಎ ಮತ್ತು ಬಿ) ಎಂದು ಗುರುತಿಸಲಾಯಿತು. ನನ್ನ ಮಗ ಎಲ್ಲಿ ಕೆಲಸ ಮಾಡುತ್ತಿದ್ದನು ನನಗೆ ಗೊತ್ತಿಲ್ಲ. ನನ್ನ ಮಗನ ಕೈ ಕಟ್ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.04-05-2016 ರಂದು ಮಧ್ಯಾಹ್ನ 01-30 ಗಂಟೆಗೆ ಸುಮಾರಿಗೆ ನಾನು ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿತನ ಕಬ್ಬಿನ ಹಾಲು ಅಂಗಡಿಯಲ್ಲಿ ನನ್ನ ಮಗನಾದ ಭೀಮಾಶಂಕರ ಈತನು ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಆಗ ನನ್ನ ಮಗನ ಬಲಗೈ ಮುಂಗೈ ಮಿಷನ್ ನಲ್ಲಿ ಸಿಕ್ಕಿಬಿದಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ನನ್ನ ಹೆಂಡತಿ ಅಲ್ಲಿಗೆ ಹೋಗಿ ನೋಡಿದ್ದೆವು ಎಂದರೆ ಗೊತ್ತಿಲ್ಲ. ಅಲ್ಲಿಗೆ ಹೋಗಿ ವಿಚಾರಣೆ ಮಾಡಲಾಗಿ ಆರೋಪಿತನ ನಿರ್ಲಕ್ಷತನದಿಂದ ಹಾಗೂ ಸಣ್ಣ

ವಯಸ್ಸಿ ನ ಬಾಲಕಾರ್ಮಿಕರಿಗೆ ಅಕ್ರಮವಾಗಿ ಕೆಲಸಕ್ಕೆ ಇಟ್ಟಿಕೊಂಡಿರುವದಿಂದ ನನ್ನ ಮಗನ ಕೈ ಕಟ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ನನ್ನ ಮಗನಿಗೆ 108 ಆಂಬ್ಯೂಲೆನ್ಸ ಮುಖಾಂತರ ಸರ್ಕಾರಿ ಆಸ್ಪತ್ರೆ ಸೇಡಂ ನಿಂದ ಕಾಮರೆಡ್ಡಿ ಕಲಬುರಗಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಕಾರ್ಮಿಕ ನಿರೀಕ್ಷರು ನನ್ನ ಮತ್ತು ಚಾ ಸಾ 2 ರವರ ಸಮಕ್ಷಮ ದಿ. 06-05-2016 ರಂದು ಪಂಚನಾಮೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ಪಿರ್ಯಾದಿಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಅದರಲ್ಲಿರುವ ವಿಷಯಗಳನ್ನು ನಿರಾಕರಿಸಿರುತ್ತಾರೆ ಆದದರಿಂದ ಅದನ್ನು ನಿ ಪಿ 2 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ಪಾಟಿ ಸವಾಲು ಇರುವುದಿಲ್ಲ ಎಂದು ತಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 576/2016 ಸಿಡಬ್ಲ್ಯೂ: 2 ಪಿಡಬ್ಲ್ಯೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 12-11-2025

ಹೆಸರು : ಚಂದ್ರಕಲಾ

ಗಂಡ ಹೆಸರು : ನಾಗಪ್ಪ

ವಯಸ್ಸು : 45 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ವಿದ್ಯಾನಗರ ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿತನು ನನಗೆ ಗೊತ್ತಿಲ್ಲ. ಚಾ ಸಾ 1 ನನಗೆ ಗೊತ್ತು. ಭೀಮಾಶಂಕರ್ ನನಗೆ ಗೊತ್ತು .

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು, ಸಾಕ್ಷಿಯು ಸದರಿ ದಾಖಲಾತಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ ಹಾಗು ಸಾಕ್ಷಿಯು ಅದರಲ್ಲಿ ಇರುವ ತನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಮನೆಗೆ ಬಂದು ಸಹಿ ಮಾಡಿ ಎಂದು ಕೇಳಿದಾಗ ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.06-05-2016 ರಂದು ನಾನು ಮತ್ತು ಚಾ ಸಾ 1 ರವರು ಹಾಗೂ ಕಾರ್ಮಿಕ ನೀರೀಕ್ಷರು ಸೇಡಂ ರವರು ಆರೋಪಿತರ ಅಂಗಡಿಗೆ ಭೇಟಿ ನೀಡಿ ಅಲ್ಲಿ ಕಬ್ಬಿನ ಹಾಲಿನ ಯಂತ್ರವನು ಇಟ್ಟುಕೊಂಡು ಮಾರಾಟ ಮಾರುತ್ತಿದ್ದನ್ನು ಖಚಿತ ಪಡಿಸಿಕೊಂಡು ಅಲ್ಲಿ ಭೀಮಾಶಂಕರ್ @ ಬೀಮಾರಾವ್ ತಂದೆ ಸೂರ್ಯಕಾಂತ ಎಂಬ 10 ವರ್ಷದ ಬಾಲಕನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದು ನಿಜ ಇರುತ್ತದೆ ಎಂದು ಗೊತ್ತಾಗಿತ್ತು ಎಂದರೆ ಸರಿಯಿಲ್ಲ. ದಿ. 04-05-2016 ರಂದು ಜರುಗಿದ ಘಟನೆಯ ನಂತರ ಕಬ್ಬಿನ ಹಾಲಿನ ಯಂತ್ರವನ್ನು

ಪೊಲೀಸರು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿಯಿಲ್ಲ. ಸ್ಥಳದಲ್ಲಿ ಇದ್ದು ಪಂಚನಾಮೆಗೆ ಸಹಾಯ ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ಪಾಟಿ ಸವಾಲು ಇರುವುದಿಲ್ಲ ಎಂದು ತಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**